## ಕೇರಳ ಮೂಲದ ಮೋಹಿನಿಯಾಟ್ಟಂ ನೃತ್ಯಕಲೆಯನ್ನು ಕರ್ನಾಟಕದಲ್ಲಿ ಜನಪ್ರಿಯಗೊಳಿಸುತ್ತಿರುವವರಲ್ಲಿ ವಿದುಷಿ ರೇಖಾ ರಾಜು ಪ್ರಮುಖರು.

### ಸ್ವಾತಿ ತಿರುನಾಳರ ನೃತ್ಯಪ್ರೀತಿ

ಕರ್ನಾಟಕ ಸಂಗೀತದ ಸುಪ್ರಸಿದ್ಧ ವಾಗ್ಗೇಯಕಾರರಾದ ಮಹಾರಾಜ ಸ್ವಾತಿ ತಿರುನಾಳರು ಮೋಹಿನಿಯಾಟ್ಟಂ ಸಮ್ಮೋಹನಕ್ಕೊಳಗಾಗಿದ್ದರು. 18ನೇ ಶತಮಾನದಲ್ಲಿ ಈ ನೃತ್ಯಕಲೆಯನ್ನು ಬಹಳ ಜನಪ್ರಿಯಗೊಳಿಸಿದ್ದರು.

ಇದಕ್ಕೂ ಮೊದಲು ಸುಮಾರು 16ನೇ ಶತಮಾನದಲ್ಲೇ ಮೋಹಿನಿಯಾಟ್ಟಂ ಕಲೆ ಪ್ರಚಲಿತದಲ್ಲಿತ್ತು. ಇದು ಎಂಟು ಪ್ರಮುಖ ನೃತ್ಯ ಪ್ರಕಾರಗಳಲ್ಲಿ ಒಂದು ಎಂಬುದನ್ನು ಕೇಂದ್ರ ಸಂಗೀತ ನೃತ್ಯ ಅಕಾಡೆಮಿ ಮಾನ್ಯ ಮಾಡಿದೆ.

### ಪೌರಾಣಿಕ ಹಿನ್ನೆಲೆ

ಕೈಲಾಸಪರ್ವತದಲ್ಲಿ ಈಶ್ವರ ಭಸ್ಮಾಸುರನಿಂದ ಸಂಕಷ್ಟಕ್ಕೆ ಒಳಗಾದಾಗ ವಿಷ್ಣು ಮೋಹಿನಿ ವೇಷದಲ್ಲಿ ಬಂದು ನೃತ್ಯದ ಮೂಲಕವೇ ಶಿವನನ್ನು ರಕ್ಷಿಸುತ್ತಾನೆ. ಅಲ್ಲಿಂದ ಮೋಹಿನಿಯಾಟ್ಟಂ ಅನ್ನು ವಿಷ್ಣು ಆರಂಭಿಸಿದ ಎಂಬ ನಂಬಿಕೆ ಬಲವಾಯಿತು. ಅದಾಗಿ ದೇವದಾಸಿಯರು ದೇವಸ್ಥಾನಗಳಲ್ಲಿ ಈ ನೃತ್ಯ ಮಾಡುತ್ತಿದ್ದರು ಎಂಬ ಅಂಶವೂ ಕುತೂಹಲಕಾರಿ.

ಕೆಲವರ್ಷಗಳ ಹಿಂದೆ ಬೆಂಗಳೂರಿನ ರಾಜಭವನದಲ್ಲಿ ನಡೆದ ಪ್ರದರ್ಶನದಲ್ಲಿ, ರೇಖಾರಾಜು ಅವರ ನೃತ್ಯ ನೆರೆದಿದ್ದ ಪ್ರೇಕ್ಷಕರನ್ನು ಬಹುವಾಗಿ ಸೆಳೆದಿತ್ತು. ನೃತ್ಯ ಮುಗಿದ ಬಳಿಕ ಪ್ರೇಕ್ಷಕರಾಗಿದ್ದ ಆಗಿನ ರಾಜ್ಯಪಾಲ ಹಂಸರಾಜ ಭಾರದ್ವಾಜ ಅವರು ಸ್ವತಃ ರೇಖಾರಾಜು ಬಳಿಗೇ ಬಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು.

### ನೃತ್ಯ ಪಯಣ

ರೇಖಾ ರಾಜು ಅವರ ತಾಯಿ ಕರ್ನಾಟಕ ಸಂಗೀತ ಕಲಾವಿದೆ. ಹೀಗಾಗಿ ಮನೆಯಲ್ಲಿ ಸಂಗೀತದ ವಾತಾವರಣವಿದೆ. ಎಳೆಯ ಮಗುವಾಗಿರುವಾಗಲೇ ಈ ನೃತ್ಯದಲ್ಲಿ ಅಪರಿಮಿತ ಸೆಳೆತ. ತಮ್ಮ ಮೂರನೇ ವಯಸ್ಸಿಗೇ ಗುರು ಪದ್ಮಿನಿ ರಾಮಚಂದ್ರನ್ ಅವರ ಬಳಿ ಭರತನಾಟ್ಯಕ್ಕೆ ಸೇರಿದರು. ಭರತನಾಟ್ಯದ 'ವಳವೂರು ಶೈಲಿ'ಯಲ್ಲಿ ನೃತ್ಯ ಕಲಿತ ಮೇಲೆ ಆಸಕ್ತಿ ಮೋಹಿನಿಯಾಟ್ಟಂ ಕಡೆಗೆ ವಾಲಿತು. ನೃತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಪಡೆದರು. ನೃತ್ಯದಲ್ಲೇ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ ಬೆಂಗಳೂರಿನ ಎಚ್‌ಬಿಆರ್ ಬಡಾವಣೆಯಲ್ಲಿ 'ನೃತ್ಯಧಾಮ ಟೆಂಪಲ್ ಆಫ್ ಫೈನ್ ಆರ್ಟ್ಸ್' ಹೆಸರಿನ ಸಂಸ್ಥೆ ಸ್ಥಾಪಿಸಿ ಮುನ್ನೂರಕ್ಕೂ ಹೆಚ್ಚು ಶಿಷ್ಯಂದಿರಿಗೆ ಸಂಗೀತ, ಮೋಹಿನಿಯಾಟ್ಟಂ, ಭರತನಾಟ್ಯ, ಮೃದಂಗ ಹೇಳಿಕೊಡುತ್ತಿದ್ದಾರೆ.

ಇದೀಗ 'ನೃತ್ಯಧಾಮ' 15 ವರ್ಷ ಪೂರೈಸಿದೆ. ಅನೇಕ ಪ್ರತಿಭಾವಂತ ಮೋಹಿನಿಯಾಟ್ಟಂ ಕಲಾವಿದರು ರೂಪುಗೊಂಡಿದ್ದಾರೆ. ನೃತ್ಯವಲ್ಲದೆ ಕ್ರಿಸ್ಟಲ್ ಹೌಸ್, ಸೈಂಟ್ ಥೆರೆಸಾ ಹೋಮ್ ಫಾರ್ ಚಿಲ್ಡ್ರನ್, ಫ್ರೀಡಂ ಫೌಂಡೇಶನ್ ಮುಂತಾದ ಎನ್‌ಜಿಒಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮೋಹಿನಿಯಾಟ್ಟಂ ಬಗ್ಗೆ ವಿದುಷಿ ರೇಖಾರಾಜು ಜೊತೆಗೆ 'ಸುಧಾ' ನಡೆಸಿದ ಸಂದರ್ಶನ ಇಲ್ಲಿದೆ.

**◆ ಮೇಲ್ನೋಟಕ್ಕೆ ಭರತನಾಟ್ಯವನ್ನೇ ಹೋಲುವ ಮೋಹಿನಿಯಾಟ್ಟಂ ನೃತ್ಯ ಭಿನ್ನವಾಗುವುದು ಹೇಗೆ?**

ಮೋಹಿನಿಯಾಟ್ಟಂ–ಭರತನಾಟ್ಯ ಎರಡೂ ಕೇರಳ–ತಮಿಳುನಾಡು ಮೂಲದ, ಒಟ್ಟಿನಲ್ಲಿ ದಕ್ಷಿಣ ಭಾರತದ ಪ್ರಮುಖ ನೃತ್ಯ ಪ್ರಕಾರಗಳು. ಭರತನಾಟ್ಯ ಹಾಗೂ ಕಥಕ್ಕಳಿ ನೃತ್ಯದ ಕೆಲವು ಅಂಶಗಳು ಮೋಹಿನಿಯಾಟ್ಟಂನಲ್ಲಿ ದಟ್ಟವಾಗಿವೆ. ಭರತನಾಟ್ಯದಲ್ಲಿ ಮೋಹಿನಿಯಾಟ್ಟಂಗಿಂತಲೂ ಹೆಚ್ಚು ಆಂಗಿಕ ಅಭಿನಯ ಇರುತ್ತದೆ. ಮೋಹಿನಿಯಾಟ್ಟಂನಲ್ಲಿ ಕೈ ಹಾಗೂ ಕಾಲುಗಳ ಚಲನೆಗೆ ಹೆಚ್ಚು ಒತ್ತು ನೀಡಲಾಗುತ್ತದೆ. ಭರತನಾಟ್ಯದಲ್ಲಿ ನಟುವಾಂಗ, ಕೊಳಲು, ಮೃದಂಗ ಮುಂತಾದ ಗಾಯನ–ವಾದನಗಳಿದ್ದರೆ ಮೋಹಿನಿಯಾಟ್ಟಂನಲ್ಲಿ 'ಎಡಕ್ಕ' ಎಂಬ ಸಣ್ಣ ಡಮರು ರೀತಿಯ ವಾದ್ಯವನ್ನು ಬಳಸಲಾಗುತ್ತದೆ. ಬಹಳ ಸಾತ್ವಿಕ ಅಭಿನಯ ಮೋಹಿನಿಯಾಟ್ಟಂ ವೈಶಿಷ್ಟ್ಯ.

**◆ ಮೋಹಿನಿಯಾಟ್ಟಂಗೆ ಬಳಸುವುದು ಕರ್ನಾಟಕ ಶಾಸ್ತ್ರೀಯ ಸಂಗೀತವೇ ಆದರೂ ಅದರಲ್ಲಿನ ಸಂಗೀತ ಕೇಳಲು ವಿಭಿನ್ನವಾಗಿರುತ್ತದೆ. ಇಲ್ಲಿಯ ಸಂಗೀತದ ಪರಿಭಾಷೆ ಯಾವುದು?**

ಕರ್ನಾಟಕ ಸಂಗೀತವನ್ನೇ ಮೋಹಿನಿಯಾಟ್ಟಂನಲ್ಲಿ ಬಳಸಲಾಗುತ್ತದೆ. ಈ ಪ್ರಕಾರದ ನೃತ್ಯದಲ್ಲಿ ಇದಕ್ಕೆ 'ಸೋಪಾನ ಶೈಲಿ' ಎಂದು ಕರೆಯಲಾಗುತ್ತದೆ. ಆದರೆ ಇಲ್ಲಿ ಹಿಂದೂಸ್ತಾನಿ ಸಂಗೀತದ ಬಳಕೆಯಿಲ್ಲ. ಈ ನೃತ್ಯ ಪ್ರಕಾರದಲ್ಲಿ ಚೋಳ್‌ಕಟ್ಟು ಎಂಬ ಹಾಡುಗಾರಿಕೆ ಬಳಕೆಯಲ್ಲಿದ್ದು, ಸಂಗೀತದ



ಪಲ್ಲವಿ, ಅನುಪಲ್ಲವಿ ಬಳಸಿ ನೃತ್ಯ–ನೃತ್ತಗಳನ್ನು ಅಭಿವ್ಯಕ್ತಿಸಲಾಗುತ್ತದೆ. ಇಲ್ಲಿ ಮಲಯಾಳಂ ಗೀತೆಗಳನ್ನೂ ಶಾಸ್ತ್ರಬದ್ಧವಾಗಿ ಹಾಡಲಾಗುತ್ತದೆ. ಇದು ನೋಡುಗರಿಗೆ ವಿಶಿಷ್ಟ ಅನುಭವ ನೀಡುತ್ತದೆ ಅಂಥ ಸಮ್ಮೋಹಕ ಶಕ್ತಿ ಮೋಹಿನಿಯಾಟ್ಟಂಗಿದೆ.

**◆ ಕರ್ನಾಟಕದಲ್ಲಿ ಮೋಹಿನಿಯಾಟ್ಟಂ ಈಗೀಗ ಜನಪ್ರಿಯತೆಯ ಹಾದಿಯಲ್ಲಿ ಸಾಗುತ್ತಿದೆ. ಇದರಲ್ಲಿ ನಿಮ್ಮ ಕೊಡುಗೆ ಏನು?**

ಭರತನಾಟ್ಯದಂತೆಯೇ ಮೋಹಿನಿಯಾಟ್ಟಂ ಕಛೇರಿಗಳಲ್ಲಿ ಕೂಡ ಪ್ರೇಕ್ಷಕರು ಆಸಕ್ತಿಯಿಂದ ಪಾಲ್ಗೊಳ್ಳುತ್ತಿರುವುದು ಸಂತಸದ ಸಂಗತಿ. ಆದರೆ ಈ ನೃತ್ಯ ಪ್ರಕಾರ ಗ್ರಾಮೀಣ, ಪಟ್ಟಣ ಭಾಗಗಳಿಗೆ ತಲುಪದಿರುವುದು ಆತಂಕದ ವಿಚಾರ. ಕರ್ನಾಟಕದಲ್ಲಿ ಈ ನೃತ್ಯ ಪ್ರಕಾರ ಹೆಚ್ಚು ಪ್ರಚಾರಗೊಳ್ಳುವಲ್ಲಿ ಮೋಹಿನಿಯಾಟ್ಟಂ ನೃತ್ಯ ಗುರು ಶ್ರೀದೇವಿ ಉನ್ನಿ ಪ್ರಮುಖ ಪಾತ್ರ ವಹಿಸಿದವರು. ನಾನು ಕೂಡ ಮೋಹಿನಿಯಾಟ್ಟಂ ಅನ್ನು ಪ್ರಚಾರಗೊಳಿಸುವಲ್ಲಿ ಶ್ರಮಿಸುತ್ತಿದ್ದು ಆಸಕ್ತ ಮಕ್ಕಳಿಗೆ ಉಚಿತ ತರಗತಿ, ನೃತ್ಯ ಶಿಬಿರ, ಪ್ರಾತ್ಯಕ್ಷಿಕೆ ನಡೆಸುತ್ತಿದ್ದೇನೆ. ಗ್ರಾಮೀಣ ಭಾಗಗಳಲ್ಲೂ ಈ ಕಲೆಗೆ ಹೆಚ್ಚು ಮಕ್ಕಳನ್ನು ಸೆಳೆಯುವಂತೆ ಮಾಡುತ್ತಿದ್ದೇನೆ.

**◆ ನಿಮ್ಮಲ್ಲಿ ಅಭಿನಯ ಚತುರತೆಯನ್ನು ಬಿತ್ತಿದವರು ಯಾರು?**

ನನ್ನ ತಾಯಿ ಜಯಲಕ್ಷ್ಮಿ ರಾಘವನ್ ಕೇರಳದ ಪಾಲಕ್ಕಾಡ್‌ನವರು. ಅವರೇ ನನ್ನಲ್ಲಿ ಮೋಹಿನಿಯಾಟ್ಟಂ ಕಲೆಯ ಬಗ್ಗೆ ಆಸಕ್ತಿ ಬೆಳೆಸಿ, ಈ ನೃತ್ಯ ಪ್ರಕಾರಕ್ಕೆ ಅಗತ್ಯವಾಗಿರುವ ಭಾವನೆ, ಅಭಿನಯ ಚತುರತೆಯನ್ನು ಗುರುತಿಸಿದರು. ಅದಾಗಿ ಗುರು ಪದ್ಮಿನಿ ರಾಮಚಂದ್ರನ್, ಕಲಾಮಂಡಲಂ ಉಷಾ ದಾತಾರ್ ಹಾಗೂ ರಾಜು ದಾತಾರ್ ಅವರ ಬಳಿ ಅಭ್ಯಾಸ ಮಾಡಿದೆ. ಕಲಾ ಗುರು ಗೋಪಿಕಾ ವರ್ಮ ಅವರ ಬಳಿಯೂ ಕಲಿತೆ. ಸದ್ಯ ಗುರು ಪ್ರೊ. ಜನಾರ್ದನ್ ಅವರಲ್ಲಿ ನೃತ್ಯ ತರಬೇತಿ ಪಡೆಯುತ್ತಿದ್ದೇನೆ.

**◆ ನೃತ್ಯ ಅಲ್ಲದೆ ನಿಮ್ಮ ಇತರ ಆಸಕ್ತಿಯ ಕ್ಷೇತ್ರಗಳಾವುವು?**

ನೃತ್ಯ ನನ್ನ ಉಸಿರು. ಶೈಕ್ಷಣಿಕವಾಗಿ ಸಿಎ ಹಾಗೂ ಎಂಬಿಎ ಪದವಿ ಪಡೆದಿದ್ದೇನೆ. ಸುಮಾರು 15 ವರ್ಷಗಳ ಕಾಲ ಕರ್ನಾಟಕ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡಿದ್ದೇನೆ. ಮೂರು ವರ್ಷ ಮೃದಂಗ ನುಡಿಸುವುದು ಕಲಿತೆ. ಫ್ಯಾಷನ್ ಡಿಸೈನರ್ ಆಗಿಯೂ ಕೆಲಸ ಮಾಡುತ್ತಿದ್ದೇನೆ. ಫ್ಯಾಬ್ರಿಕ್‌ನಲ್ಲಿ ವಿವಿಧ ಉಡುಪು ವಿನ್ಯಾಸ ಮಾಡುವುದೆಂದರೆ ಇಷ್ಟ. ನನ್ನ ಬಟ್ಟೆಗಳನ್ನು, ನೃತ್ಯದ ಕಾಸ್ಟ್ಯೂಮ್‌ಗಳನ್ನು ನಾನೇ ಸಿದ್ಧಪಡಿಸುತ್ತೇನೆ. ಕವನ, ಲೇಖನ ಬರೆಯುವ ಹವ್ಯಾಸ ಇದೆ. ಪುಸ್ತಕ ಓದುವುದು ಬಹಳ ಇಷ್ಟ. ■